ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಮತ್ತು ಗೋಕಾಕ್ ನಗರದಲ್ಲಿ ಇರುವ ಕನ್ನಡ ಶಾಲೆಯ ಮತ್ತು ಉರ್ದು ಶಾಲೆಗಳ ಬಾಡಿಗೆ ಹಣವನ್ನು ಸರ್ಕಾರದವರು ಕಟ್ಟಿದ ಮಾಲೀಕರಿಗೆ ಕಳೆದ ೪—೫ ವರ್ಷಗಳಿಂದ ಕೊಟ್ಟಿರುವುದಿಲ್ಲ. ಹೀಗಾಗಿ ಬೈಲಹೊಂಗಲ ನಗರದಲ್ಲಿ ಉರ್ದು ಶಾಲೆಯ ಬಿಲ್ಡಿಂಗ್ ಕಟ್ಟಿದ ಬಾಡಿಗೆಯನ್ನು ಕೊಡದೇ ಇದ್ದ ಕಾರಣಕೋರ್ಟ್ ಮುಖಾಂತರ ಕಟ್ಟಡವನ್ನು ಕಬ್ಜಾ ಸಹ ತೆಗೆದುಕೊಂಡಿರುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳಿಗೆ ತುಂಬಲಾರದಷ್ಟು ನುಕ್ಸಾನಾಗಿರುತ್ತದೆ. ಮತ್ತು ಸರ್ಕಾರಕ್ಕೆ ಸಹ ಕೆಟ್ಟ ಹೆಸರು ಬಂದಿರುತ್ತದೆ.

ಆದಕಾರಣ ಕೂಡಲೇ ಶಾಲೆಯ ಬಿಲ್ಡಿಂಗ್ ಮಾಲೀಕರಿಗೆ ಬಾಡಿಗೆಯನ್ನು ಕೊಡಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಬೇಕು. ತಮ್ಮ ಮುಖಾಂತರ ನಾನು ಶಿಕ್ಷಣ ಸಚಿವರಿಗೆ ವಿನಂತಿಸಿ ಕೊಂಡಿರುತ್ತೇನೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಗೋಕಾಕ್ ತಾಲ್ಲೂಕುಗಳ ನಗರದಲ್ಲಿ ಪ್ರಾಥಮಿಕ ಕನ್ನಡ ಮತ್ತು ಉರ್ದು ಶಾಲೆಗಳ ಬಾಡಿಗೆಯನ್ನು ಕಳೆದ ೫–೬ ವರ್ಷಗಳಿಂದ ಕೊಡದೇ ಇದ್ದ ಕಾರಣ ಬಿಲ್ಡಿಂಗ್ ಮಾಲೀಕರು ಶಾಲಾ ಕಟ್ಟಡಗಳನ್ನು ಬಿಡಬೇಕೆಂದು ಕೇಳಿರುವುದು ಸರಿಯಲ್ಲ. ಕೇವಲ ೧೯೮೬—೮೭ರ ಸಾಲಿನ ವರೆಗೂ ೧೯೮೭–೮೮ನೇ ಸಾಲಿನ ಬಗ್ಗೆ ಮಾತ್ರ ಬಾಡಿಗೆ ಕೊಡುವುದು ಬಾಕಿ ಇತ್ತು. ೧—೪—೧೯೮೭ರ ನಂತರ (ಅಂದರೆ ಜಾಲ್ತಿ ಸಾಲಿನ ಬಾಬ್ತು ೧೯೮೭—೮೮ರ ಬಗ್ಗೆ) ಮಾತ್ರ ಬಾಡಿಗೆ ಸಲ್ಲಿಸಲು ಜಿಲ್ಲಾ ಪರಿಷತ್ತಿನ ಆದೇಶದಂತೆ ದಿನಾಂಕ ೧೪–೧–೧೯೮೮ರಂದು ಎಲ್ಲಾ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಹಣ ೪,೨೦,೮೦೦–೦೦ ರೂ. ಮಾತ್ರ) ಬಿಡುಗಡೆ ಮಾಡಲಾಗಿದೆ. ಮತ್ತು ೧–೪–೧೯೮೭ರ ಪೂರ್ವದ ಅಧಿಯ ಹಿಂದಿನ ಬಾಕಿ ಹಣವನ್ನು ಸಹ ಜಿಲ್ಲಾ ಪರಿಷತ್ತಿಗೆ ಶೀಘ್ರವಾಗಿ ಬಿಡುಗಡೆ ಮಾಡುವಂತೆ ಕೋರಲಾಗಿದೆ.

## ೪. ರಾಜ್ಯದಲ್ಲಿ ಭೂಪರಿವರ್ತನೆಗೆ ಪರಿಹಾರ ಮಾರ್ಗವನ್ನು ಸೂಚಿಸುವಂತೆ ಸರ್ಕಾರಿ ಆಜ್ಞೆಗೆ ಒತ್ತಾಯ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಕರ್ನಾಟಕ ಟೌನ್ ಮತ್ತು ಕಂಟ್ರಿ ಪ್ಲಾನಿಂಗ್ ಕಾಯಿದೆಯಂತೆ ಯೋಜನಾ ಪ್ರಾಧಿಕಾರ ಭೂಪರಿವರ್ತನೆ ಮಾಡಬೇಕೆಂಬ ನಿಯಮವಿದ್ದರೂ ಸರ್ಕಾರ 'ಗ್ರೀನ್ ಬೆಲ್ಟ್ ವಿರಿಯ' ಯಾವುದೆಂಬುದನ್ನು ನಿಗದಿಗೊಳಿಸಲು ವಿಳಂಬವಾದ ಕಾರಣ ಜಿಲ್ಲಾಧಿಕಾರಿಗಳು ಭೂಪರಿವರ್ತನೆ ಮಾಡುತ್ತಿದ್ದರು. ಆದರೆ ಉಚ್ಚ ನ್ಯಾಯಾಲಯದ ಆದೇಶದಂತೆ ಜಿಲ್ಲಾಧಿಕಾರಿಗಳು ಭೂಪರಿವರ್ತನೆ ಮಾಡಲು ನಿರ್ಬಂಧವಾಗಿದೆ. ಕಂದಾಯ ಇಲಾಖೆಯ ತಾ. ೨೬-೯-೧೯೮೭ರ ಆದೇಶದಂತೆ ಜಿಲ್ಲಾಧಿಕಾರಿಗಳು ಕನ್ವರ್ಶನ್ ಮಾಡಬಾರದೆಂಬ ಸೂಚನೆ ನೀಡಲಾಗಿದೆ. ರಾಜ್ಯಾದ್ಯಂತ ಅನೇಕ ಪಟ್ಟಣಗಳಲ್ಲಿ ಸಾವಿರಾರು ಪ್ರಕರಣಗಳು ಕನ್ವರ್ಶನ್‌ಗಾಗಿ ಬಾಕಿ ಇದ್ದು ಜನರಿಗೆ ವಿಪರೀತ ತೊಂದರೆ ಆಗಿದೆ. ಜಿಲ್ಲಾಧಿಕಾರಿಗಳು ಭೂ ಪರಿವರ್ತನೆ ಮಾಡಬಾರದೆಂದೂ ಆದೇಶ ನೀಡಿದ ಸರ್ಕಾರ ಯಾರು ಮಾಡಬೇಕೆಂದು ತಿಳಿಸಿಲ್ಲ. ಸರ್ಕಾರಿ ಆಜ್ಞೆ ಪ್ರಬಂಧವಾಗುವ ಬದಲು ಪರಿಹಾರ ಮಾರ್ಗವನ್ನೂ ಸೂಚಿಸಬೇಕು. ಆದ್ದರಿಂದ ಈ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಮಾನ್ಯ ಸದಸ್ಯರಿಗೆ ಉತ್ತರ ತರಿಸಿಕೊಡುತ್ತೇನೆ.

## ೫. ಮಂಗಳೂರು ಉಳ್ಳಾಲದ ಕಾರ್ಡುದಾರರಿಗೆ ಅಕ್ಕಿ ಪ್ರಮಾಣವನ್ನು ಕಡಿಮೆ ಮಾಡದೆ ಇರಲು ಒತ್ತಾಯ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ರೇಷನ್ ಕಾರ್ಡ್‌ದಾರರಿಗೆ ವಿತರಿಸುವ ಅಕ್ಕಿ ಪ್ರಮಾಣದಲ್ಲಿ ಕಡಿತ ಮಾಡಲಾಗುವುದೆಂದು ಹೇಳಲಾಗುತ್ತಿದೆ. ಇದೊಂದು ಅಪಘಾತಕರ ವಿಚಾರ. ಇದೀಗ ಮಂಗಳೂರು ನಗರದಲ್ಲಿ ಕಾರ್ಡು ಒಂದಕ್ಕೆ ೨೫ ಕೆಲೋ ಅಕ್ಕಿ ಕೊಡಲಾಗುತ್ತಿದೆ. ಉಳ್ಳಾಲ

ಗ್ರಾಮದಲ್ಲಿ ೨೦ ಕೆಲೋ ಅಕ್ಕಿ ಕೊಡಲಾಗುತ್ತದೆ. ಮಂಗಳೂರು ನಗರಕ್ಕೆ ತಾಗಿಕೊಂಡೇ ಉಳ್ಳಾಲವಿದೆ. ಈ ಪ್ರಮಾಣವನ್ನು ಎಷ್ಟು ಮಾತ್ರಕ್ಕೂ ಕಡಿಮೆ ಮಾಡಬಾರದು. ಮಂಗಳೂರು ಮತ್ತು ಉಳ್ಳಾಲದಲ್ಲಿ ಅತ್ಯಂತ ಬಡವರಾದ ಬೀಡಿ ಕೂಲಿಗಾರರು ಮತ್ತು ಹೆಂಚಿನ ಕೂಲಿಗಾರರು, ಮೀನು ವ್ಯವಸಾಯದ ಬಡ ಮೀನುಗಾರರೇ ಬಹು ಸಂಖ್ಯೆಯಲ್ಲಿರುತ್ತಾರೆ. ಅಕ್ಕಿ ಪ್ರಮಾಣ ಕಡಿಮೆ ಮಾಡಿದರೆ ಭಾರೀ ಕಷ್ಟ ಮತ್ತು ತೊಂದರೆಗಳಿಗೆ ಈ ಬಡವರು ಒಳಗಾಗುತ್ತಾರೆ. ಅಷ್ಟು ಮಾತ್ರಕ್ಕೂ ಅಕ್ಕಿ ಪ್ರಮಾಣವನ್ನು ಕಡಿತಗೊಳಿಸದೆ ಹಿಂದೆ ಇದ್ದಂತೆಯೆ ಮುಂದುವರಿಯಬೇಕು. ಮಂಗಳೂರು ಮತ್ತು ಉಳ್ಳಾಲದ ಕಾರ್ಡುದಾರರಿಗೆ ಅಕ್ಕಿ ಕಡಿತಗೊಳಿಸದೆ ಅಕ್ಕಿಯ ವಿತರಣೆ ಮಾಡಬೇಕಾಗಿದೆ. ಈ ಕುರಿತು ಆಹಾರ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ:

ಭಾರತ ಸರ್ಕಾರವು ಅಕ್ಕಿಯ ಹಂಚಿಕೆಯನ್ನು ತಿಂಗಳಿಗೆ ೬೦,೧೦೦ ಮೆ. ಟನ್‌ನಿಂದ ೪೫,೦೦೦ ಮೆ. ಟನ್‌ಗೆ ಇಳಿಸಿರುವುದರಿಂದ. ರೇಷನ್ ಕಾರ್ಡುದಾರರಿಗೆ ವಿತರಿಸುವ ಅಕ್ಕಿಯ ಪ್ರಮಾಣದಲ್ಲಿ ಕಡಿತ ಮಾಡುವುದು ಅನಿವಾರ್ಯವಾಗಿದೆ. ಉಲ್ಲಾಳ ಪ್ರದೇಶವು ಮಂಡಲ ಪಂಚಾಯಿತಿ ಆಗಿ ಪರಿವರ್ತಿತ ವಾಗಿರುವುದರಿಂದ ಆ ಪ್ರದೇಶದಲ್ಲಿ ಹೆಸರು ಕಾರ್ಡುಗಳನ್ನು ವಿತರಿಸಬೇಕಾಗಿದೆ. ಆದರೆ ಪಟ್ಟಣ ಪ್ರದೇಶದ ಸೌಲತ್ತುಗಳನ್ನೇ ಮುಂದುವರಿಸಬೇಕೆಂದು ಬೇಡಿಕೆ ಬಂದದ್ದರಿಂದ ಸದ್ಯಕ್ಕೆ ಆ ಸವಲತ್ತುಗಳನ್ನೇ ಜಿಲ್ಲಾಧಿಕಾರಿಗಳು ಮುಂದುವರಿಸಿಕೊಂಡು ಹೋಗಿರುತ್ತಾರೆ. ಮಂಗಳೂರು ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ವಿತರಿಸುವ ಪ್ರಮಾಣದಲ್ಲೇ ಉಲ್ಲಾಳ ಪಡಿತರ ಪ್ರದೇಶಕ್ಕೆ ಹೆಸರು ಕಾರ್ಡ್ ವಿತರಿಸುವರೆವಿಗೆ ಆಹಾರ ಧಾನ್ಯ ಮತ್ತು ಇತರೆ ವಸ್ತುಗಳನ್ನು ವಿತರಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗುವುದು. ಆದರೆ, ಈ ಪ್ರದೇಶಗಳಿಗೆ ಸದ್ಯದ ಪರಿಸ್ಥಿತಿಯಲ್ಲಿ ಹಿಂದೆ ವಿತರಿಸುತ್ತಿದ್ದ ಪ್ರಮಾಣದಲ್ಲೇ ವಿತರಣೆಯನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಭಾರತ ಸರ್ಕಾರದಿಂದ ರಾಜ್ಯಕ್ಕೆ ಹಂಚಿಕೆಯು ಹೆಚ್ಚಾದ ಪಕ್ಷದಲ್ಲಿ ಮಂಗಳೂರು ಮತ್ತು ಉಲ್ಲಾಳ ಪ್ರದೇಶಗಳಿಗೆ ಮೊದಲಿನ ಪ್ರಮಾಣವನ್ನೇ ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗುತ್ತದೆ.

## ೬) ತೇರದಾಳದಿಂದ ರಾಮನಗರಕ್ಕೆ ಕೆ.ಎಸ್.ಆರ್.ಟಿ.ಸಿ. ಎಕ್ಸ್‌ಪ್ರೆಸ್ ಬಸ್ಸನ್ನು ಓಡಿಸಲು ಮನವಿ

ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ವಿಜಾಪುರ ವಿಭಾಗದವರು ತೇರದಾಳದಿಂದ ಬೆಂಗಳೂರಿಗೆ ಒಂದು ವೇಗದೂತ ಬಸ್ಸು ಓಡಿಸುತ್ತಿದ್ದಾರೆ, ಜಮಖಂಡಿ, ಬೀಳಗಿ, ಮುಧೋಳ ತಾಲ್ಲೂಕುಗಳಿಗೆ ಸೇರಿದ ರೇಷ್ಮೆ ಬೆಳೆಗಾರರು ಪ್ರತಿ ದಿವಸ ತಮ್ಮ ರೇಷ್ಮೆ ಗೂಡುಗಳನ್ನು ಈ ಬಸ್ಸಿನ ಮುಖಾಂತರವೇ ಬೆಂಗಳೂರಿಗೆ ತಂದು ಅಲ್ಲಿಂದ ಅವುಗಳನ್ನು ಪ್ರಮುಖ ರೇಷ್ಮೆ ಮಾರುಕಟ್ಟೆಯಾದ ರಾಮನಗರಕ್ಕೆ ಒಯ್ಯುತ್ತಾರೆ. ತೇರದಾಳದಿಂದ ಬೆಂಗಳೂರಿಗೆ ಬಸ್ಸು ಬಂದ ನಂತರ ರಾಮನಗರಕ್ಕೆ ಬಸ್ಸು ಬದಲಾಯಿಸಬೇಕಾಗುತ್ತದೆ. ಹೀಗೆ ಬದಲಾಯಿಸುವಾಗ ಬೆಂಗಳೂರು ಬಸ್ ನಿಲ್ದಾಣದಲ್ಲಿ ಹಮಾಲರು ಮತ್ತು ಕೆ ಎಸ್.ಆರ್.ಟಿ ಸಿ.ಯ ಕೆಲವು ಕೆಳ ದರ್ಜೆಯ ನೌಕರರು ಲಗೇಜ್ ಹೆಸರಿನಿಂದ ರೇಷ್ಮೆ ಬೆಳೆಗಾರರನ್ನು ಹಿಂಸೆಗೀಡು ಮಾಡುತ್ತಾರೆ.

ರೈತರು ಈ ಸುಲಿಗೆ ತಪ್ಪಿಸಲು ತೇರದಾಳದಿಂದ ಬೆಂಗಳೂರಿಗೆ ಬರುವ ಬಸ್ಸನ್ನು ಕೇವಲ ೩೦ ಕಿ.ಮೀ. ದೂರವಿರುವ ರಾಮನಗರಕ್ಕೆ ಓಡಿಸಬೇಕೆಂದು ನಮ್ಮ ಭಾಗದ ಜನರ ಬಹು ದಿನದ ಬೇಡಿಕೆಯಾಗಿದೆ. ನಾವೇನು ಹೊಸ ಬಸ್ಸು ಕೇಳಿಲ್ಲ, ಸಾರಿಗೆ ಸಚಿವರಿಗ ಈ ಒಂದು ಸಣ್ಣ ವಿಷಯದ ಕುರಿತು ನಾನು ಬರೆದ ಪತ್ರಕ್ಕೆ ಉತ್ತರ ಕೊಡುವ ಸೌಜನ್ಯವು ಇಲ್ಲ. ಬಸ್ಸು ಓಡಿಸುವುದಂತು ದೂರವೇ ಉಳಿಯಿತು. ಈಗಲಾದರೂ ಮಾನ್ಯ ಸಾರಿಗೆ ಸಚಿವರು ತೇರದಾಳ ಬೆಂಗಳೂರು ಬಸ್ಸನ್ನು